ಭಕ್ತನನ್ನು ಬಂಧನಕ್ಕೆ ಒಳಪಡಿಸುವ ಅಥವಾ ಅವನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ ಕಟ್ಟಿಹಾಕುವ ಯಾವುದೂ ಆಗ ಉಳಿಯುವುದಿಲ್ಲ." (*ಕೃತಿಶ್ರೇಣಿ*, ೧: ೧೨೨) ದ್ವೇಷ, ಭಯ, ಲೋಭ ಮತ್ತು ಹೃದಯದೌರ್ಬಲ್ಯಗಳೆಂಬ ಕೀಳು ಭಾವನೆಗಳು ಪರಾಭಕ್ತಿಯ ಸುಳಿಯಲ್ಲಿ ಮಾಯವಾಗಿಬಿಡುವವು. ಭಕ್ತನ ಅಂತರಂಗದ ಚಿಲುಮೆಯು ಭಗವಂತನೆಡೆಗೆ ಯಾವುದೇ ಅಡೆತಡೆಗಳಿಲ್ಲದೆ, ಅಪ್ರಯತ್ನವಿಲ್ಲದೆ ಪ್ರವಹಿಸತೊಡಗುವುದು.

ಯಾವುದು ಶ್ರೇಷ್ಠ, ಭಕ್ತಿಯೇ ಅಥವಾ ಜ್ಞಾನವೇ? ಈ ಪ್ರಶ್ನೆಯು ಹಿಂದೂಧರ್ಮದ ವಿವಿಧ ಮತಗಳ ನಡುವೆ ಶತಶತಮಾನಗಳ ದ್ವೇಷಪೂರಿತ ವಾಗ್ವಿವಾದಕ್ಕೆ ಕಾರಣವಾಗಿದ್ದಿತು. ಭಕ್ತಿಗಿಂತ ಜ್ಞಾನವೇ ಶ್ರೇಷ್ಠ ಎಂಬ ಸಾಮಾನ್ಯ ಅಭಿಪ್ರಾಯಕ್ಕೆ ಕಾರಣ, ಭಕ್ತಿಯನ್ನು ಒಂದು ಬಗೆಯ ಭಾವನೆಯ ಜೊತೆಗೆ ಏಕೀಭವಿಸಿದ್ದೇ ಆಗಿದೆ. ಇನ್ನು ತತ್ತ್ವಶಾಸ್ತ್ರಜ್ಞರ ನಡುವಣ ಕಲಹಗಳಿಗೆ ಅನೇಕ ಕಾರಣಗಳಿದ್ದವು. ಶ್ರೀಶಂಕರಾಚಾರ್ಯರು ಭಕ್ತಿಯನ್ನು ಉಪಾಸನೆಯಲ್ಲಿ ಸೇರಿಸಿಬಿಡುತ್ತಾರೆ. ಅವರ ಪ್ರಕಾರ, ಭಕ್ತಿಯು ಉನ್ನತ ಮಟ್ಟದ ಕರ್ಮವಲ್ಲದೆ ಬೇರೆಯಲ್ಲ. ಕರ್ಮವು ಅವಿದ್ಯೆಯ ಫಲ ಹಾಗೂ ಪರಿವರ್ತನೆಯ ಗುಣವುಳ್ಳದ್ದು. ಹೀಗಾಗಿ ಅದು ಅವ್ಯಯ ಮತ್ತು ನಿರಪೇಕ್ಷವಾದ ಬ್ರಹ್ಮಜ್ಞಾನಕ್ಕೆ ಸಮನಾಗಲು ಸಾಧ್ಯವಿಲ್ಲ. ಅದರತ್ತ ಕೊಂಡೊಯ್ಯುವ ಸಾಧನವೂ ಅದಲ್ಲ. ಇದು ಶ್ರೀಶಂಕರರ ಅಭಿಪ್ರಾಯ.

ಇದಕ್ಕೆ ಬದಲಾಗಿ ಶ್ರೀರಾಮಾನುಜಾಚಾರ್ಯರು ಜ್ಞಾನ ಯೋಗದ ಬಗ್ಗೆ ಮಾತನಾಡುವಾಗ, ಅದು ಜೀವಾತ್ಮನ ಅನುಭವ ವಷ್ಟೆ ಎಂದು ಹೇಳುತ್ತಾರೆ. ಇದು **ವಿದ್ಯಾ** ಅಥವಾ **ವೇದನ** ಎಂದು ಕರೆಯಲ್ಪಡುವ ಪರಮಾತ್ಮಾನುಭವಕ್ಕಿಂತ ಭಿನ್ನವಾಗಿದೆ. ಇದನ್ನು ಭಕ್ತನು ಭಗವಂತನ ಅನುಗ್ರಹದಿಂದ ಮಾತ್ರವೇ ಪಡೆಯಬಹುದು. ಸ್ವಾಮಿ ವಿವೇಕಾನಂದರು ಆಧುನಿಕ ಯುಗದ ಸಮನ್ವಯಾಚಾರ್ಯರಾದ ಶ್ರೀರಾಮಕೃಷ್ಣರ ಶಿಷ್ಯರು. ಹೀಗಾಗಿ ಮೇಲಿನ ಎರಡು ಅಭಿಪ್ರಾಯಗಳನ್ನು ಸಮನ್ವಯಗೊಳಿಸುವುದಕ್ಕೆ ಅವರಿಗೆ ಯಾವ ಕಷ್ಟವೂ ಆಗಲಿಲ್ಲ. ಈ ವಿಚಾರದಲ್ಲಿ ಅವರು ಹೀಗೆ ಹೇಳುತ್ತಾರೆ:

**ನಿಜವಾಗಿ ನೋಡಿದರೆ, ಜ್ಞಾನಕ್ಕೂ ಭಕ್ತಿಗೂ ನಡುವೆ, ಸಾಧಾರಣ ಜನ ಭಾವಿಸುವಷ್ಟು ದೊಡ್ಡ ಅಂತರವೇನೂ ಇಲ್ಲ.... ಜ್ಞಾನಿಗಳು ಭಕ್ತಿಯು ಮುಕ್ತಿಗೆ ಸಾಧನ ಎನ್ನುತ್ತಾರೆ. ಭಕ್ತರು ಅದು ಸಾಧನವಷ್ಟೇ ಅಲ್ಲ, ಪಡೆಯಬೇಕಾದ ಗುರಿ ಕೂಡ ಎಂದು ಭಾವಿಸುತ್ತಾರೆ. ನನ್ನ ದೃಷ್ಟಿಯಲ್ಲಿ ಅದು ಅಷ್ಟೇನೂ ಭೇದವಿಲ್ಲದ ಅಲ್ಪ ವ್ಯತ್ಯಾಸ ಮಾತ್ರ ಭಕ್ತಿಯನ್ನು ಇನ್ನೊಂದು ಗುರಿಗೆ ಸಾಧನವಾಗಿ ಬಳಸಿದಾಗ, ಅದು ಗೌಣೀಭಕ್ತಿ ಎನಿಸುವುದು. ಮೇಲಿನ ಹಂತದಲ್ಲಿ ಪರಾಭಕ್ತಿಯನ್ನು ಗೌಣೀಭಕ್ತಿಯಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ತಾವು ಆಚರಿಸುವ ಉಪಾಸನೆಗೇ ಹೆಚ್ಚು ಪ್ರಾಮುಖ್ಯ ಕೊಡುವರು. ಪರಿಪೂರ್ಣ ಪ್ರೇಮವು ಲಭಿಸಿದಾಗ, ನಮಗಿಚ್ಛೆಯಿಲ್ಲದಿದ್ದರೂ ನೈಜಜ್ಞಾನ ಕೂಡ ದೊರಕುವುದು ಹಾಗೂ ಪೂರ್ಣಜ್ಞಾನವು ಇರುವುದಾದರೆ, ಅದು ಪ್ರೇಮವಿಲ್ಲದೆ ಇರುದಿವುಲ್ಲ ಎನ್ನುವುದನ್ನು ಅವರು ಮರೆತುಬಿಡುವರು** (*ಕೃತಿಶ್ರೇಣಿ*, ೧: ೧೮೮).

ಶ್ರೀರಾಮಾನುಜರು, **ಭಕ್ತಿಶ್ಚ ಜ್ಞಾನವಿಶೇಷ ಏವ ಚ** – (*ವೇದಾರ್ಥಸಂಗ್ರಹ*) ಭಕ್ತಿಯೆಂದರೆ, ವಿಶೇಷರೂಪವಾದ ಜ್ಞಾನ ಎಂದು ವ್ಯಾಖ್ಯಾನ ಮಾಡುತ್ತಾರೆ. ವಿಶೇಷರೂಪವಾದ ಜ್ಞಾನ ವೆಂದರೆ ಏನು? **ಏವಂ ರೂಪ ಧ್ರುವಾನುಸ್ಮೃತಿರೇವ ಭಕ್ತಿಶಬ್ದೇನ ಅಭಿಧೀಯತೇ ಉಪಾಸನಾ ಪರ್ಯಾಯತ್ವಾದ್ ಭಕ್ತಿಶಬ್ದಸ್ಯ** (*ಶ್ರೀಭಾಷ್ಯ*, ೧.೧.೧.) ಧ್ರುವಾನುಸ್ಮೃತಿ ಎಂದರೆ ನಿರಂತರವಾದ, ಯಾವ ಮಾರ್ಪಡೂ ಹೊಂದದ, ಪರಮಾತ್ಮನ ಸ್ಮರಣೆ. ಇದು ಭಗವಂತನನ್ನು ಕುರಿತು ಉತ್ಕಟವಾಗಿ ಮಾಡುವ ಧ್ಯಾನದಿಂದ ಉತ್ಪನ್ನವಾಗುತ್ತದೆ.

ಸ್ವಾಮಿ ವಿವೇಕಾನಂದರು ತಮ್ಮ 'ಭಕ್ತಿಯೋಗ' ದಲ್ಲಿ ಶ್ರೀರಾಮಾನುಜರ ಶ್ರೀಭಾಷ್ಯದಿಂದ ಬಹುವಾಗಿ ಉದ್ಧರಿಸುತ್ತಾರೆ. ಆದರೆ ಶ್ರೀಶಂಕರ ಮತ್ತು ಶ್ರೀರಾಮಾನುಜ – ಈ ಇಬ್ಬರು ಮಹಾನ್ ಆಚಾರ್ಯರ ತಾರ್ಕಿಕ ಅಭಿಪ್ರಾಯಗಳನ್ನು ಸಮನ್ವಯಗೊಳಿಸುವ ಉದ್ದೇಶದಿಂದ, ಸೂಕ್ಷ್ಮ ತಾತ್ತ್ವಿಕ ಜಿಜ್ಞಾಸೆ ಯನ್ನೇನೂ ಅವರು ಕೈಗೊಳ್ಳುವುದಿಲ್ಲ. ಅವರ ದೃಷ್ಟಿಯಲ್ಲಿ ಸತ್ಯದ ಬಗೆಗಿನ ಭಾವನೆಗಳು ಸಾಪೇಕ್ಷವಾದುವು. ಹೀಗಾಗಿ ಸತ್ಯದ ಪ್ರಮಾಣವು ಒಬ್ಬನು ಆರಿಸಿಕೊಳ್ಳುವ ಆಧಾರ–ಚೌಕಟ್ಟಿನ ಮೇಲೆ ಅವಲಂಬಿತವಾಗಿದೆ.

"ಮಾನವನು ತಪ್ಪಿನಿಂದ ನಿಜದೆಡೆಗೆ ಹೋಗುವುದಿಲ್ಲ, ಆದರೆ ಸತ್ಯದಿಂದ ಸತ್ಯದೆಡೆಗೆ ಅಂದರೆ ಕೆಳಮಟ್ಟದ ಸತ್ಯಗಳಿಂದ ಉನ್ನತ ಸತ್ಯಗಳೆಡೆಗೆ ಏರುತ್ತ ಹೋಗುತ್ತಾನೆ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅವರ ಸರ್ವಾಂಗೀಣ ತತ್ತ್ವ ಶಾಸ್ತ್ರ ಮತ್ತು ಅನುಭವಗಳಲ್ಲಿ ಸತ್ಯತತ್ತ್ವದ ಬಗೆಗಿನ ಎಲ್ಲ ಅಭಿಪ್ರಾಯಗಳೂ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಸಮನ್ವಯಕ್ಕೆ ಧಕ್ಕೆ ಬರುವಂತಹ ಯಾವುದೇ ರೀತಿಯ ತಿರಸ್ಕಾರದ ಮೌಲ್ಯ ನಿರ್ಣಯವು ಅವುಗಳಲ್ಲಿ ಕಾಣಬರುವುದಿಲ್ಲ.

ಭಕ್ತಿಯ ವ್ಯಾಖ್ಯಾನದ ಬಗೆಗಿನ ನಮ್ಮ ಈ ಚರ್ಚೆಯನ್ನು ಅವರ ಮಾತುಗಳಲ್ಲಿಯೇ ನಾವು ಹೀಗೆ ಕೊನೆಗೊಳಿಸಬಹುದು: **"ಮೊದಮೊದಲಿಗೆ ಸಾಮಾನ್ಯ ರೀತಿಯ ಉಪಾಸನೆಯ ರೂಪದಲ್ಲಿ ಆರಂಭವಾಗಿ, ಕೊನೆಗೆ ಭಗವಂತನೆಡೆಗೆ ನಿರಂತರವಾಗಿ ಹರಿಯುವ ಪ್ರೇಮಪ್ರವಾಹವಾಗಿ ಪರಿಣಮಿಸುವ ಮಾನಸಿಕ ಪ್ರಯತ್ನಗಳ ಪ್ರವಾಹವೇ ಭಕ್ತಿ ಎನ್ನುವುದು ಸುಸ್ಪಷ್ಟವಾಗಿದೆ"** (*ಕೃತಿಶ್ರೇಣಿ*, ೧: ೧೯೦).

*(ಮುಂದುವರಿಯುವುದು)*

### ಒಂದು ಅರಿಕೆ

**ಈ ಪತ್ರಿಕೆಯ ಜನವರಿ ೨೦೧೦ ರ ಸಂಚಿಕೆಯ ಪುಟ ೧೦೪ ರಲ್ಲಿ ಉಲ್ಲೇಖವಾಗಿರುವ ಶ್ರೀ ವೆಂಕಟಕೃಷ್ಣಯ್ಯನವರು ಬೇರೆ ಮತ್ತು ಚಿತ್ರದಲ್ಲಿರುವ 'ತಾತಯ್ಯ' ರೆಂದು ಪ್ರಸಿದ್ಧರಾದ ಶ್ರೀ ವೆಂಕಟ ಕೃಷ್ಣಯ್ಯನವರು ಬೇರೆ. ಹಾಗೆಯೇ ಪುಟ ೧೦೭ ರಲ್ಲಿ, ಶ್ರೀ ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರದೆಂದು ಉಲ್ಲೇಖಿಸಲಾಗಿರುವ ಪುಸ್ತಕಗಳನ್ನು ಬರೆದವರು ಶ್ರೀ ಎಸ್. ಜಿ. ನರಸಿಂಹಾಚಾರ್ಯರು. ಈ ದೋಷಗಳಿಗೆ ಕ್ಷಮೆ ಯಾಚಿಸುತ್ತೇವೆ. – ಸಂ.**

# ಸ್ವಾಮಿ ವಿವೇಕಾನಂದರ ಮಾತೆಯರು

ಸ್ವರ್ಣಗೌರಿ



ಸ್ವಾಮಿ ವಿವೇಕಾನಂದರ ಜೀವನದಲ್ಲಿ, ಅದರಲ್ಲೂ ಅವರ ಅಮೆರಿಕ ದೇಶದ ಪ್ರವಾಸದ ದಿನಗಳಲ್ಲಿ, ಅವರಿಗೆ ನೆರವಾದವರಲ್ಲಿ ಬಹುತೇಕರು ಮಹಿಳೆಯರು. ಅವರನ್ನು ಶಕ್ತಿಸ್ವರೂಪಿಣಿಯರಂತೆ ಸ್ವಾಮೀಜಿ ಕಂಡು ಗೌರವಿಸುತ್ತಿದ್ದರು. ಈ ಪುಣ್ಯಮಾತೆಯರ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕಿಯ ಹಲವಾರು ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಇವರು ಹಲವು ಗ್ರಂಥಗಳನ್ನು ಅನುವಾದಿಸಿದ್ದಾರೆ.

ಸ್ವಾಮಿ ವಿವೇಕಾನಂದ ಸ್ಮಾರಕ, ಕನ್ಯಾಕುಮಾರಿ

"ಒಬ್ಬ ಹೆಣ್ಣು ಮಗಳು ಹತ್ತು ಗಂಡುಮಕ್ಕಳಿಗೆ ಸಮ. ಹತ್ತು ಗಂಡುಮಕ್ಕಳನ್ನು ಬೆಳೆಸಿದ ಪುಣ್ಯವು ಒಂದು ಹೆಣ್ಣುಮಗುವನ್ನು ಪಾಲನೆ ಮಾಡುವುದರಿಂದ ಲಭಿಸುತ್ತದೆ" ಎನ್ನುತ್ತದೆ ಸ್ಕಂದ ಪುರಾಣ.

ವೇದಗಳ ಕಾಲದಿಂದಲೂ ಭಾರತೀಯ ಸಂಪ್ರದಾಯವು ಸ್ತ್ರೀಯರಿಗೆ ಅತ್ಯಂತ ಮಹತ್ವವನ್ನು ನೀಡಿದೆ. ಸ್ತ್ರೀಯರು ಅಬಲೆಯರು ಎನ್ನುವುದು ಸಾಮಾನ್ಯ ಅಭಿಪ್ರಾಯ. ಆದರೆ ಅನೇಕ ಬ್ರಹ್ಮವಾದಿನಿಯರು ವೇದಕಾಲದಲ್ಲಿ ಇದ್ದುದನ್ನು ನೋಡುತ್ತೇವೆ. ವೇದಾಂತವು ಭಗವಂತನ ಸೃಷ್ಟಿಯಲ್ಲಿ ಸ್ತ್ರೀಪುರುಷರಿಬ್ಬರಿಗೂ ಸಮಾನ ಸ್ಥಾನವನ್ನು ನೀಡಿರುವುದನ್ನು ಕಾಣುತ್ತೇವೆ.

ಸ್ವಾಮಿ ವಿವೇಕಾನಂದರು ಒಂದೇ ಸ್ಥಳದಲ್ಲಿ ಇದ್ದುಕೊಂಡು ಜ್ಞಾನಪ್ರಸಾರವನ್ನು ಮಾಡಿದವರಲ್ಲ. ಅವರು ಮಿಂಚಿನಂತೆ ಮಿಂಚುತ್ತ, ಸಿಡಿಲಿನಂತೆ ಗುಡುಗುತ್ತ, ಕಡಲಿನಂತೆ ಭೋರ್ಗರೆಯುತ್ತ, ಪ್ರಪಂಚದ ವಿವಿಧ ಭಾಗಗಳಲ್ಲಿ ಸಂಚರಿಸಿ, ತಮ್ಮ ಧೀಮಂತ ವ್ಯಕ್ತಿತ್ವದಿಂದ, ಎಲ್ಲೆಲ್ಲಿಯೂ ಅರಿವಿನ ಕಿರಣಗಳನ್ನು ಪಸರಿಸಿದ ಜ್ಞಾನಸೂರ್ಯರಾದರು. ಆ ಮೂಲಕ ಪೂರ್ವ ಮತ್ತು ಪಶ್ಚಿಮ ದೇಶಗಳ ನಡುವಣ ಸೇತುವೆಯಾದರು. ಈ ಕಾರ್ಯದಲ್ಲಿ ಮಹಿಳೆಯರ ಭೂಮಿಕೆ ಅತ್ಯಂತ ಪ್ರಮುಖವಾದುದು.

ಹೆತ್ತ ತಾಯಿಯಾದ ಭುವನೇಶ್ವರಿ ದೇವಿ ಸ್ವಾಮೀಜಿಯವರ ಬಾಲ್ಯಜೀವನದಲ್ಲಿ ಅತ್ಯಂತ ಪ್ರಭಾವವನ್ನು ಉಂಟುಮಾಡಿದ ವ್ಯಕ್ತಿಯಾಗಿದ್ದರು. ತಮ್ಮ ವ್ಯಕ್ತಿತ್ವದಲ್ಲಿದ್ದ ಅಪೂರ್ವ ಗುಣಗಳನ್ನು ಅವರು ತಮ್ಮ ಸುಪುತ್ರನಿಗೆ ವರ್ಗಾಯಿಸಿದರು. ಸ್ವಾಮಿ ವಿವೇಕಾನಂದರು ತಮ್ಮ ತಾಯಿಯ ಬಗ್ಗೆ ಹೀಗೆ ಉದ್ಗಾರವೆತ್ತಿದ್ದಾರೆ: "ನನ್ನ ತಾಯಿಯಲ್ಲಿ ಅದ್ಭುತವಾದ ಇಂದ್ರಿಯನಿಗ್ರಹ ಶಕ್ತಿಯಿತ್ತು. ಒಮ್ಮೆ ಅವಳು ಎಡೆಬಿಡದೆ ಹದಿನಾಲ್ಕು ದಿನಗಳ ಕಾಲ ಉಪವಾಸ ಮಾಡಿದಳು. ಆಕೆಯ ಚಾರಿತ್ರ್ಯವೇ ನನ್ನ ಜೀವನ ಹಾಗೂ ಕಾರ್ಯಗಳಿಗೆ ನಿತ್ಯಸ್ಫೂರ್ತಿಯಾಗಿದೆ."

ಅದೇ ರೀತಿ, ಶ್ರೀಮಾತೆ ಶಾರದಾದೇವಿಯವರು ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಮಾತೆಯ ಪಾತ್ರವನ್ನು ವಹಿಸಿದರು. ಅವರಿಬ್ಬರ ನಡುವೆ ಇದ್ದ ಸಂಬಂಧವು ತಾಯಿಮಕ್ಕಳ ನಡುವಿನ ಸಾಮಾನ್ಯ ಪ್ರೀತಿಯನ್ನು ಮೀರಿದ್ದ ದೈವೀಪ್ರೇಮವಾಗಿತ್ತು! ಶ್ರೀಮಾತೆಯವರನ್ನು ನೋಡಲು ಹೋಗುವಾಗಲೆಲ್ಲ, ಸ್ವಾಮೀಜಿ ಗಂಗಾಜಲವನ್ನು ಸಿಂಪಡಿಸಿಕೊಂಡು ಹೋಗುತ್ತಿದ್ದರಂತೆ. ಶ್ರೀಮಾತೆಯವರ ಆಶೀರ್ವಾದ ದೊರೆಯದೆ, ಅಮೆರಿಕಕ್ಕೆ ಹೋಗಲು ಅವರು ಇಷ್ಟಪಡಲಿಲ್ಲ. ಸ್ವಾಮೀಜಿ ತಮ್ಮ ಸಂನ್ಯಾಸಿ ಸಹೋದರರಾದ ಸ್ವಾಮಿ ಶಿವಾನಂದರಿಗೆ ಬರೆದ ಪತ್ರದಲ್ಲಿ ಹೀಗೆ ನುಡಿಯುತ್ತಾರೆ: "ನನಗೆ ತಾಯಿಯ ಕೃಪೆ ಎನ್ನುವುದು ತಂದೆಯ ಕೃಪೆಗಿಂತ ಸಾವಿರ ಪಟ್ಟು ಅಮೂಲ್ಯವಾದುದು. ತಾಯಿಯ ಕೃಪೆ ಮತ್ತು ಆಶೀರ್ವಾದಗಳೇ ನನಗೆ ಸರ್ವೋತ್ಕೃಷ್ಟವಾದುವು." ತಮ್ಮ ಜೀವನದ ಕಡೆಯ ಭಾಗದಲ್ಲಿ ಸ್ವಾಮಿ ವಿವೇಕಾನಂದರು ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: "ತಾಯಿ, ನಾನಿಷ್ಟು ಅರ್ಥ ಮಾಡಿಕೊಂಡಿದ್ದೇನೆ: ನಿನ್ನ ಕೃಪಾಶೀರ್ವಾದಗಳಿಂದ ನನ್ನಂಥ ನೂರಾರು ನರೇಂದ್ರರು ಜನಿಸುತ್ತಾರೆ. ಇಡೀ ಪ್ರಪಂಚಕ್ಕೆ ಒಬ್ಬಳೇ ತಾಯಿಯಿರುವುದು. ನಿನಗೆ ಬೇರೆ ಯಾರೂ ಸರಿಸಮಾನರಿಲ್ಲ."

ಸ್ವಾಮಿ ವಿವೇಕಾನಂದರ ಮೇಲೆ ಶ್ರೀಮಾತೆ ಶಾರದಾ ದೇವಿಯವರಿಗೆ ಅತ್ಯಂತ ಪ್ರೀತಿ. ಸ್ವಾಮೀಜಿಯವರ ದೇಹ ತ್ಯಾಗದ ಸುದ್ದಿಯನ್ನು ಕೇಳಿ ತಮಗಾದ ದಿಗ್ಭ್ರಮೆಯನ್ನು, ಸ್ವಾಮಿ ವಿಮಲಾನಂದಜಿ ಅವರಿಗೆ ಬರೆದ ಪತ್ರದಲ್ಲಿ ಹೀಗೆ ವ್ಯಕ್ತಪಡಿಸು ತ್ತಾರೆ: "ಸ್ವಾಮೀಜಿ ಮಹಾರಾಜರ ಅಗಲುವಿಕೆಯ ಈ ನೋವನ್ನು ನಾನು ಹೇಗೆ ಬಣ್ಣಿಸಲಿ?"

ಈ ಇಬ್ಬರು ಮಹಾನ್ ಮಾತೆಯರಲ್ಲದೆ, ಸ್ವಾಮಿ ವಿವೇಕಾನಂದರು ಅಮೆರಿಕಕ್ಕೆ ಹೋದಾಗ, ಎಲ್ಲರಿಗಿಂತ ಹೆಚ್ಚಾಗಿ ಅವರ ಕಾರ್ಯಸಾಧನೆಯಲ್ಲಿ ಸಹಾಯಕರಾಗಿದ್ದವರೆಂದರೆ ಸ್ತ್ರೀಯರೇ. ಅವರ ಅದ್ಭುತ ಕಾರ್ಯದಲ್ಲಿ ಸಹಭಾಗಿಗಳಾಗಲು ಅನೇಕ ಸ್ತ್ರೀಪುಷ್ಪಗಳನ್ನು ಆ ಜಗನ್ಮಾತೆಯೇ ಸಿದ್ಧಪಡಿಸಿದ್ದಳೇನೋ?! ಸ್ವಾಮಿ ವಿವೇಕಾನಂದರ ಅಮೆರಿಕವಾಸವೆಂಬ ಲೀಲಾಪರದೆಯು ಸರಿಯುತ್ತಲೇ, ಅವರ ದಿವ್ಯ ವ್ಯಕ್ತಿತ್ವದಿಂದ ಆಕರ್ಷಿತರಾದ ಒಬ್ಬೊಬ್ಬರೇ ಮಹಿಳೆಯರು ಅವರೆಡೆಗೆ ಬರಲಾರಂಭಿಸಿದರು.

### ಮಿಸ್ ಕ್ಯಾಥರೀನ್ ಸ್ಯಾನ್‌ಬಾರ್ನ್

ಸ್ವಾಮಿ ವಿವೇಕಾನಂದರು ಮೊದಲ ಬಾರಿ ಅಮೆರಿಕಕ್ಕೆ ಹೋದದ್ದು, ೧೮೯೩ ರ ಜುಲೈ ತಿಂಗಳಿನಲ್ಲಿ. ಆಗ ಅವರಿಗೆ ಒಂದು ಆಘಾತಕಾರಿಯಾದ ಸುದ್ದಿ ಕಾದಿತ್ತು. ಸರ್ವಧರ್ಮ ಸಮ್ಮೇಳನ ಸೆಪ್ಟೆಂಬರ್ ತಿಂಗಳಲ್ಲಿ ಆರಂಭಗೊಳ್ಳುವುದಿತ್ತು. ಅದಲ್ಲದೆ, ಅದರ ಪ್ರತಿನಿಧಿಗಳಾಗಲು ಪರಿಚಯಪತ್ರದ ಆವಶ್ಯಕತೆ ಇತ್ತು. ಅದಲ್ಲದೆ ಪರಿಚಯಪತ್ರವನ್ನು ನೀಡುವ ಗಡುವು ಕೂಡ ಮುಗಿದುಹೋಗಿತ್ತು. ಮೊದಲಿನ ಉತ್ಸಾಹವೆಲ್ಲ ಬತ್ತಿಹೋಗಿ, ಮದ್ರಾಸಿನ ತಮ್ಮ ಶಿಷ್ಯರ ಮಾತು ಕೇಳಿಕೊಂಡು ಬಂದ ತಾವು ಮೂರ್ಖರೆಂದು ಭಾವಿಸಿಕೊಂಡರು ಸ್ವಾಮೀಜಿ.

ಚಿಕಾಗೋ ಬಹಳ ದುಬಾರಿಯಾದ ನಗರ. ಸ್ವಾಮೀಜಿ ಬಳಿ ಇದ್ದುದು ಸ್ವಲ್ಪವೇ ಹಣ. ಮಿತವ್ಯಯದ ದೃಷ್ಟಿಯಿಂದ ಸ್ವಾಮೀಜಿ ಬಾಸ್ಟನ್ನಿಗೆ ಪ್ರಯಾಣ ಮಾಡಿದರು. ರೈಲಿನಲ್ಲಿ ಮಿಸ್ ಕ್ಯಾಥರೀನ್ ಸ್ಯಾನ್‌ಬಾರ್ನ್ ಎಂಬ ಹಿರಿಯ ಮಹಿಳೆಯನ್ನು ಅವರು ಭೇಟಿ ಮಾಡಿದರು. ಸ್ವಾಮೀಜಿಯವರ ಅಪೂರ್ವ ವ್ಯಕ್ತಿತ್ವಕ್ಕೆ ಮಾರುಹೋದ ಆ ಗೌರವಾನ್ವಿತ ಮಹಿಳೆ ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದಳು. ಆಕೆ ಒಬ್ಬ ಲೇಖಕಿ, ಕವಯಿತ್ರಿ ಮತ್ತು ಪತ್ರಿಕಾ ಸಂಪಾದಕಿಯೂ ಆಗಿದ್ದಳು. ಅವಳ ಮನೆಯಲ್ಲಿ ಸ್ವಾಮೀಜಿ ಅನೇಕ ಗಣ್ಯ ವ್ಯಕ್ತಿಗಳನ್ನು ಸಂಧಿಸಿದರು. ಈಕೆಯ ಪರಿಚಯವಾದುದು ಸ್ವಾಮೀಜಿಯವರ ಅಮೆರಿಕ ದಿನಗಳಲ್ಲಿ ಅತ್ಯಂತ ಪ್ರಮುಖ ಘಟನೆಯಾಗಿ ಪರಿಣಮಿಸಿತು.

### ಮಿಸೆಸ್ ಜಾರ್ಜ್ ಹೇಲ್

ಬಾಸ್ಟನ್‌ನಲ್ಲಿ ಐದು ವಾರಗಳಿದ್ದು ಚಿಕಾಗೋಗೆ ಹಿಂದಿರು ಗುತ್ತಿದ್ದ ವೇಳೆಯಲ್ಲಿ ಸ್ವಾಮೀಜಿಗೆ ಮಾರ್ಗದರ್ಶಕನಾಗುವೆನೆಂದು ಮಾತುಕೊಟ್ಟ ಆಗಂತುಕನು ಕೊಟ್ಟ ಮಾತನ್ನು ಮರೆತು ಅವಸರದಲ್ಲಿ ಹೊರಟೇಹೋದನು. ದಾರಿ ತಿಳಿಯದೆ ನಡೆದು ನಡೆದು ಸೋತ ಸ್ವಾಮೀಜಿ ಒಂದೆಡೆ ಕುಸಿದುಕುಳಿತರು. ಈ



ತನ್ನ ಮನೆಯ ಮುಂದೆ ಮಿಸ್ ಕ್ಯಾಥರೀನ್ ಸ್ಯಾನ್‌ಬಾರ್ನ್

ಸಮಯದಲ್ಲಿ ಅವರ ಎದುರಿನಲ್ಲೇ ಇದ್ದ ಮನೆಯ ಬಾಗಿಲು ತೆರೆಯಿತು. ಆ ಮನೆಯಿಂದ ಹೊರಬಂದ, ಸಭ್ಯ, ಸುಸಂಸ್ಕೃತ, ಐಶ್ವರ್ಯವಂತ ಹಿರಿಯ ಮಹಿಳೆಯೊಬ್ಬಳು ಗಾಂಭೀರ್ಯದಿಂದ ಕೂಡಿದ ಮೆಲುದನಿಯಲ್ಲಿ ಮಾತನಾಡಿಸಿದಳು. ಸ್ವಾಮೀಜಿಯ ಕಷ್ಟಗಳನ್ನೆಲ್ಲಾ ಕೇಳಿದ ತಕ್ಷಣ, ಅವರನ್ನು ಒಳಬರಮಾಡಿಕೊಂಡು, ಊಟೋಪಚಾರಗಳನ್ನು ನೀಡಿ, ತಾನೇ ಸ್ವತಃ ಸರ್ವಧರ್ಮ ಸಮ್ಮೇಳನಕ್ಕೆ ಕರೆದುಕೊಂಡು ಹೋಗುವುದಾಗಿ ಆಶ್ವಾಸನೆಯಿತ್ತಳು. ಆಕೆಯೇ ಮಿಸೆಸ್ ಜಾರ್ಜ್ ಹೇಲ್.

ಅನಂತರ ಆಕೆಯ ಮನೆಯವರೆಲ್ಲಾ ಸ್ವಾಮೀಜಿಯವರ ಆಪ್ತಮಿತ್ರರಾಗಿಬಿಟ್ಟರು. ಮಿಸೆಸ್ ಜಾರ್ಜ್ ಹೇಲ್ ಚಿಕಾಗೋ ನಗರದಲ್ಲಿ ಅವರಿಗೆ ಆತಿಥ್ಯ ನೀಡಿ ಸಹಾಯ ಮಾಡದಿದ್ದರೆ ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನಕ್ಕೆ ಹೋಗುತ್ತಿದ್ದರೋ ಇಲ್ಲವೋ ಎನ್ನುವುದೇ ಸಂದೇಹ. ಈಕೆಯನ್ನು ಸ್ವಾಮೀಜಿ **'ಮದರ್ ಚರ್ಚ್'** ಎಂದು ಕರೆದು, ಕೊನೆಯವರೆಗೂ ಆಕೆಯ ಮಗನಂತೆ ನಡೆದುಕೊಂಡರು. ಅವರ ಪತಿಯಾದ ಜಾರ್ಜ್ ಹೇಲ್ ಅವರನ್ನು **'ಫಾದರ್ ಪೋಪ್'** ಎಂದು ಕರೆಯುತ್ತಿದ್ದರು.

ಹೇಲ್ ಮನೆಯವರು ಬಹಳ ಅದೃಷ್ಟವಂತರು, ಭಾಗ್ಯ ಶಾಲಿಗಳು ಎಂದರೆ ತಪ್ಪಾಗಲಾರದು. ಏಕೆಂದರೆ ಸ್ವಾಮೀಜಿ ಹಲವಾರು ಬಾರಿ ಅವರ ಅತಿಥಿಗಳಾಗಿದ್ದುದಲ್ಲದೆ ೧೮೯೪ನೇ ಇಸವಿಯಲ್ಲಿ, ಪೂರ್ತಿ ಒಂದು ವರ್ಷ, ಅವರ ಮನೆಯನ್ನೇ



ಮಿಸೆಸ್ ಜಾರ್ಜ್ ಹೇಲ್

ತಮ್ಮ ಚಟುವಟಿಕೆಗಳ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡರು. ಅವರಿಗೆ ಬರುತ್ತಿದ್ದ ಪತ್ರಗಳೆಲ್ಲ ಈ ಮನೆಯ ವಿಳಾಸಕ್ಕೆ ಬಂದು ತಲುಪುತ್ತಿದ್ದವು. ಸ್ವಾಮೀಜಿಯವರ ಪ್ರೀತಿವಿಶ್ವಾಸಗಳಿಗೆ ಇವರ ಮನೆಯವರು ಎಷ್ಟು ಪಾತ್ರರಾಗಿದ್ದರೆಂಬುದಕ್ಕೆ ಅವರು ಮಿಸೆಸ್ ಜಾರ್ಜ್ ಹೇಲ್‌ಳ ಮಗಳಾದ ಮೇರಿ ಹೇಲ್‌ಳಿಗೆ ಬರೆದ ಈ ಪತ್ರವೇ ಸಾಕ್ಷಿ: "ಇಂಥ ಕುಟುಂಬವು ಸಿಗುವುದು ಬಹು ವಿರಳ. ಇಲ್ಲದಿದ್ದರೆ ದೇವರೇಕೆ ಈ ಕುಟುಂಬದ ಮೇಲೆ ಇಷ್ಟೊಂದು ಅನುಗ್ರಹ ತೋರಿದ್ದಾನೆ? ಆಹಾ! ಎಂಥ ಅದ್ಭುತವಾದ ಕರುಣೆ ಇವರದು! ಎಲ್ಲಿಯಾದರೂ ಒಬ್ಬ ಬಡವನಿದ್ದಾನೆ ಎಂದು ತಿಳಿದರೆ ಸಾಕು, ತಕ್ಷಣವೇ ಮನೆಯವರೆಲ್ಲಾ ಆತನಿಗೆ ಊಟ, ಬಟ್ಟೆಗಳನ್ನು ತೆಗೆದುಕೊಂಡುಹೋಗುತ್ತಾರೆ. ನಂತರ ಅವನಿಗೆ ಒಂದು ಕೆಲಸವನ್ನೂ ಹುಡುಕಿಬಿಡುತ್ತಾರೆ!"

ಅವರ ಆತಿಥ್ಯವನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾ, ೧೮೯೮ ರಲ್ಲಿ ಭಾರತದಿಂದ ಮೇರಿ ಹೇಲ್‌ಳಿಗೆ ಸ್ವಾಮಿ ವಿವೇಕಾನಂದರು ಹೀಗೆ ಬರೆಯುತ್ತಾರೆ: 'ನೀವೆಲ್ಲರೂ ನನ್ನ ಪಾಲಿಗೆ ಅದೆಷ್ಟು ಸಹೃದಯಿಗಳಾಗಿದ್ದೀರಿ! ಹಿಂದೂಗಳ ನಂಬಿಕೆಯಂತೆ ಬಹುಶಃ ಹಿಂದಿನ ಜನ್ಮದಲ್ಲಿ ನಾನು ನಿಮ್ಮವನಾಗಿದ್ದೆ ಅನ್ನಿಸುತ್ತದೆ!"

## ಮೇರಿ ಹೇಲ್

ತಮಗೆ ಅತ್ಯಂತ ಪ್ರೀತಿಪಾತ್ರರಾಗಿದ್ದ ನಾಲ್ಕು ಹೆಣ್ಣುಮಕ್ಕಳನ್ನು (ಮಿಸೆಸ್ ಜಾರ್ಜ್ ಹೇಲ್‌ಳ ಇಬ್ಬರು ವಿವಾಹಿತ ಹೆಣ್ಣುಮಕ್ಕಳು ಹಾಗೂ ಅವರ ತಂಗಿಯ ಇಬ್ಬರು ಅವಿವಾಹಿತ ಹೆಣ್ಣುಮಕ್ಕಳು) ಪುಷ್ಪದಂತೆ ಪವಿತ್ರರು ಮತ್ತು ಸದಾ ಹಸನ್ಮುಖಿಗಳು ಎಂದು ಸ್ವಾಮೀಜಿ ಶ್ಲಾಘಿಸುತ್ತಿದ್ದರು. ಅದರಲ್ಲೂ ಮಿಸೆಸ್ ಜಾರ್ಜ್ ಹೇಲ್‌ಳ ಮಗಳಾದ ಮೇರಿ ಹೇಲ್‌ಳ ಮೃದು ಮಧುರ ಸ್ವಭಾವವು ಅವರಿಂದ ಹೆಚ್ಚು ಮೆಚ್ಚುಗೆಯನ್ನು ಗಳಿಸಿತ್ತು. ಸ್ವಾಮೀಜಿಯವರ ಪತ್ರಮಾಲಿಕೆಯಲ್ಲಿ ಈಕೆಗೆ ಬರೆದ ಪತ್ರಗಳೇ ಹೆಚ್ಚಾಗಿವೆ. ಮೇರಿ ಹೇಲ್‌ಳು ಸ್ವಾಮೀಜಿಯವರ ವೇದಾಂತ ಪ್ರಚಾರ ಕಾರ್ಯಕ್ಕೆ ಮಾಡಿದ ಗುರುತರ ಸೇವೆಯೆಂದರೆ ಸ್ವಾಮಿ ಶಿವಾನಂದರ ಮೂಲಕ ಬೇಲೂರು ಮಠದ ಸ್ಥಾಪನೆಗಾಗಿ ತನ್ನ ಆಸ್ತಿಯಲ್ಲಿ ಸುಮಾರು ೪೮,೫೦೦/– ರೂಪಾಯಿಗಳನ್ನು ನೀಡಿದುದು!

## ಮಿಸೆಸ್ ಎಸ್.ಕೆ. ಬ್ಲಾಡ್‌ಗೇಟ್

೧೮೯೩ ರ ಸೆಪ್ಟೆಂಬರ್ ೧೧ ರಿಂದ ೨೧ ರವರೆಗೆ ಅಮೆರಿಕದ ಚಿಕಾಗೊ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನವು ಹೊಸದೊಂದು ಇತಿಹಾಸವನ್ನೇ ಸೃಷ್ಟಿಸಿತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಸ್ವಾಮಿ ವಿವೇಕಾನಂದರ ಭಾಷಣ ಮುಗಿದ ಮೇಲೆ ಜನರು ಅವರನ್ನು ಸಂಧಿಸಲು ಹಿಂಡು ಹಿಂಡಾಗಿ ಮುನ್ನುಗ್ಗುತ್ತಿದ್ದರು. ಆಗ ಅಲ್ಲಿಯೇ ಇದ್ದು ಇದನ್ನೆಲ್ಲಾ ವೀಕ್ಷಿಸುತ್ತಿದ್ದ ಮಿಸೆಸ್ ಎಸ್.ಕೆ. ಬ್ಲಾಡ್‌ಗೇಟ್ ಎಂಬ ಮಹಿಳೆಯು, "ಇಂಥ ಪ್ರಲೋಭನೆಯನ್ನು ಸಹಿಸಿಕೊಳ್ಳುವುದಾದರೆ ನೀನು ನಿಜವಾಗಿಯೂ ದೇವತೆಯೆ ಸರಿ" ಎಂದು ಮನಸ್ಸಿನಲ್ಲೇ ಅಂದುಕೊಂಡಳಂತೆ. ಈ ಘಟನೆಯನ್ನು ಕುರಿತು ಹಲವಾರು ವರ್ಷಗಳ ನಂತರ ಸ್ವಾಮೀಜಿಯ ಸ್ನೇಹಿತೆ ಮ್ಯಾಕ್‌ಲೌಡ್‌ಳ ಬಳಿ ಅವಳೇ, **'ಭೂಮಿಯ ಮೇಲೆ ನಿಜವಾಗಿಯೂ ಒಬ್ಬ ದೇವರಿರುವುದಾದರೆ ಅದು ಆ ವ್ಯಕ್ತಿ!'** ಎಂದು ನುಡಿಯುತ್ತಾಳೆ. ಹಾಗೆಯೇ ಆ ಮಹಿಳೆ ಸಮರ್ಪಣಾ ಭಾವದಲ್ಲಿ ಸ್ವಾಮೀಜಿಯ ಆಳೆತ್ತರದ ಚಿತ್ರವನ್ನು ತನ್ನ ಮಲಗುವ ಕೋಣೆಯಲ್ಲಿ ತೂಗುಹಾಕಿ ಜೀವನ ಪರ್ಯಂತ ಅವರ ಆರಾಧಕಳಾದಳು! ಮುಂದೆ ಸ್ವಾಮೀಜಿ ಈಕೆಯ ಮನೆಯಲ್ಲೇ ಆತಿಥ್ಯ ಪಡೆದರು. ಸ್ವಾಮೀಜಿಯವರು ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಮಾಡಿದ ಧರ್ಮಪ್ರಚಾರ ಕಾರ್ಯದಲ್ಲಿ ಈಕೆಯಿಂದ ಬಹಳ ಸಹಾಯ ದೊರೆಯಿತು.

## ಮಿಸೆಸ್ ಪ್ಯಾಟರ್‌ಸನ್

ಧರ್ಮಸಮ್ಮೇಳನದ ನಂತರ ಅಮೆರಿಕದಲ್ಲಿ ಧರ್ಮಪ್ರಚಾರ ಪ್ರಾರಂಭಿಸಿದ ಸ್ವಾಮೀಜಿಯವರಿಗೆ ಕಪ್ಪುಜನಾಂಗದವರು (ನೀಗ್ರೋ) ಎಂಬ ಕಾರಣದಿಂದ ಹೋಟೆಲ್‌ಗಳಲ್ಲಿ ತಂಗಲು ಸ್ಥಳವೇ ದೊರೆಯುತ್ತಿರಲಿಲ್ಲ. ಆಗ ಅವರ ಧೀಮಂತ ವ್ಯಕ್ತಿತ್ವಕ್ಕೆ ಮಾರುಹೋದ ಕೊಲ್ಕತಾದಲ್ಲಿನ ಅಮೆರಿಕದ ದೂತಾವಾಸದ ಕಾನ್ಸುಲೇಟ್ ಜನರಲ್ ಅವರ ಪತ್ನಿ ಮಿಸೆಸ್ ಪ್ಯಾಟರ್‌ಸನ್ ಅವರನ್ನು ತನ್ನ ಮನೆಯ ಅತಿಥಿಯಾಗಿ ಸ್ವೀಕರಿಸಿದಳು. ಅನಂತರ ಆಕೆಯೂ ಸ್ವಾಮೀಜಿಯ ಆಪ್ತಸ್ನೇಹಿತೆಯಾದಳು. ಮೊದಲ ನೋಟದಲ್ಲೇ ಮಾರುಗೊಳಿಸುವ ಸ್ವಾಮೀಜಿಯವರ ವ್ಯಕ್ತಿತ್ವ ಅದೆಷ್ಟು ಆಕರ್ಷಕವಾಗಿದ್ದಿರಬೇಕು?!

## ಮ್ಯಾಡಂ ಮೇರಿ ಲೂಯಿಸ್

ಅಮೆರಿಕ ದೇಶಕ್ಕೆ ಬಂದ ಒಂದೆರಡು ತಿಂಗಳಲ್ಲೇ ಸ್ವಾಮಿ ವಿವೇಕಾನಂದರು ಎಲ್ಲರ ಮೆಚ್ಚುಗೆಯನ್ನು ಗಳಿಸಿದರು ಹಾಗೂ